ಓ. ಎಸ್ . 26/2016 ಡಿ .ಡಬ್ಲ್ಯೂ - 6 ಚಿದಾನಂದ ದರಬಾರೆ

( ದಿನಾಂಕ 16-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**<u>ಪಾಟೀಸವಾಲು : ವಾದಿ ಪರ ಶ್ರೀ. ಕೆ ಬಿ ಕೆ ವಕೀಲರಿಂದ -</u>**

ನಾನು ಎಂ.ಎ, ಬಿ. ಇಡಿ ಓದಿದ್ದು. ನಾನು ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೇನೆ. ನನಗೆ ಸಾಕ್ಷಿ ಹೇಳಲು ಕೋರ್ಟನಿಂದ ಈ ಹಿಂದೆ ಸಮನ್ಸ ಬಂದಿತ್ತು. ವಾದಿಯು ಪ್ರತಿವಾದಿ ನಂ. 1 ರಿಂದ 5 ರವರ ಮೇಲೆ ಮನೆ ಕಟ್ಟಿದ ಬಗ್ಗೆ ಈ ದಾವೆ ಮಾಡಿದ್ದಾರೆ. ಈ ದಾವೆಯ ಆಸ್ತಿಯ ಸರ್ವೆ ನಂ. 118/ಅ/2. ಅದು ಒಟ್ಟು ಕ್ಷೇತ್ರ 2 ಎಕರೆ 30 ಗುಂಟೆ ಇತ್ತು. ಅಲ್ಲಿ ಪ್ಲಾಟ ನಂ. 47 ರಿಂದ 61 ರವರೆಗೆ ಪ್ಲಾಟ ಹಾಕಿದ್ದು ಅದು ಉತ್ತರ ದಕ್ಷಿಣ ಇದೆ. ಪಶ್ಚಿಮಕ್ಕೆ ರಸ್ತೆ ಇದೆ. ದಕ್ಷಿಣಕ್ಕೂ ಸಹ ಒಂದು ಸಣ್ಣ ರಸ್ತೆ ಇದೆ. ದಾವಾ ಆಸ್ತಿಯ 30 ಗುಂಟೆ ಜಮೀನಿನ ಚಕಬಂದಿ ಹೇಳಲು ಬರುವುದಿಲ್ಲ . ಸಾಕ್ಷಿಯ ಪ್ರಮಾಣ ಪತ್ರವನ್ನು ಬರೆಯಲು ನಾನೇ ಮಾಹಿತಿ ನೀಡಿರುತ್ತೇನೆ. ಸರ್ವೆ ನಂ. 118/ಅ/2 ಈಗ ಯಾರ ಹೆಸರಿನಲ್ಲಿ ಉತಾರ ಇದೆ ಎಂದರೆ ಸಾಕ್ಷಿ ಆ 5 ಜನ ಮನೆ ಕಟ್ಟಿದವರ ಹೆಸರಿನಲ್ಲಿದೆ ಎಂದು ಹೇಳುತ್ತಾರೆ. ನಿಪಿ.1 ರಲ್ಲಿ 30 ಗುಂಟೆ ಜಮೀನು ವಾದಿಯ ಹೆಸರಿನಲ್ಲಿ ಕಾಣುತ್ತಿದೆ. ಮೊಹಮ್ಮದ ಶಪಿ ಯಾವಾಗ ತೀರಿಕೊಂಡಿದ್ದಾರೆ ನನಗೆ ಗೊತ್ತಿಲ್ಲ. 10-15 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ. ನಾನು ಸರ್ವೆ ನಂ. 118/ಅ/2 ರಲ್ಲಿ 30 ಗುಂಟೆ ಜಮೀನಲ್ಲಿ ನಾನು 50 ನೇ ನಂಬರ ಪ್ಲಾಟ ನ್ನು ಖರೀದಿ ಮಾಡಿದ್ದೇನೆ.

2. ಮೊಹಮ್ಮದ ಶಪಿ ಪೂರ್ವ ಬಾಜುದ 2 ಎಕರೆ ಎನ ಎ ಮಾಡಿದ್ದ ಎಂದರೆ ನಿಜ. ಆ 2 ಎಕರೆ ಜಮಿನಿಗೆ ಪ್ಲಾ ಟ ನಂ. 1 ರಿಂದ 46 ನಂಬರ ಕೊಟ್ಟಿದ್ದ ಎಂದರೆ ನಿಜ. ಅದಕ್ಕೆ ಸಿ ಟಿ ಎಸ ನಂ. 4335 ಬಿದ್ದಿತ್ತು ಎಂದರೆ ನಿಜ. ಆ 2 ಎಕರೆ ಜಮೀನಿನ ಪಶ್ಚಿಮ ಬಾಜು 30 ಗುಂಟೆ ಖಾಲಿ ಇತ್ತು ಎಂದರೆ ನಿಜ. ಆ 30 ಗುಂಟೆಯ ಪಶ್ಚಿಮ ಬಾಜು 2 ಎಕರೆ 10 ಗುಂಟೆ ಎನ್ ಎ ಮಾಡಿದ್ದ ಎಂದರೆ ನಿಜ. ಅದಕ್ಕೆ ಪ್ಲಾಟ ನಂ. 1 ರಿಂದ 47 ಕೊಟ್ಟಿದ್ದ ಎಂದರೆ ಸರಿಯಲ್ಲ. ಅದಕ್ಕೆ ಸಿ ಟಿ ಎಸ ನಂ. 4335ಎ ಎಂದು ನಂಬರ ಆಗಿತ್ತು ಎಂದರೆ ನಿಜ. ಅದರಲ್ಲಿ ಪ್ಲಾಟ ನಂ.47 ರಿಂದ 61 ಪ್ಲಾಟ ಆಗಿದ್ದು, ಅದನ್ನು ಸಿ ಟಿ ಎಸ ನಂ. 4335 ಬಿ ಎಂದು ನಂಬರ ಆಗಿತ್ತು ಎಂದು ಹೇಳುತ್ತಾರೆ. ನಾನು ಖರೀದಿ ಮಾಡಿದ್ದು ಪ್ಲಾಟ ನಂ. 50. ನಾನು ಖರೀದಿ ಮಾಡುವ ಮುನ್ನ ಸದರಿ 2 ಎಕರೆ 30ಗುಂಟೆಯ ಪೂರ್ವ ಮತ್ತು ಪಶ್ಚಿಮ ಬಾಜುವಿಗೆ ಎನ ಎ ಮಾಡಿದ ಬಗ್ಗೆ ನಾನು ಎನ ಎ ಕಾಪಿ ನೋಡಿದೆ. ಅದರ ಮಧ್ಯದಲ್ಲಿ 30 ಗುಂಟೆ ಜಮೀನು ಎನ್ ಎ ಆಗಿಲ್ಲ ಎಂಬುದನ್ನು ತೋರಿಸಿದರು. ನಾನು ಪುರಸಭೆ ಯಿಂದ ತಂದಂತಹ ಅನುಮತಿ ಪತ್ರ ಮತ್ತು ನಗರ ಭೂ ಮಾಪನ ಕಚೇರಿ ನಿಪ್ಪಾಣಿಯಿಂದ ಮ್ಯಾಪ ನ್ನು ನೋಡಿದ್ದೆನೆ. ಹಾಗೂ ಎನ ಎ ಕಾಪಿಯನ್ನು ಸಹ ನೋಡಿದ್ದೇನೆ. ಅವುಗಳ ಕಾಪಿಗಳನ್ನು ನಾನು ವಕೀಲರಿಗೆ

ಕೊಟ್ಟಿದ್ದೇನೆ. ಪ್ರತಿವಾದಿಯರು ಯಾವ ಪ್ಲಾಟಗಳನ್ನು ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಪ್ಲಾಟ ನಂ. 47 ನ್ನು ತುಕಾರಾಮ ಕೋಳಿ ಖರೀದಿ ಮಾಡಿದ್ದಾರೆ, ಪ್ಲಾಟ ನಂ. 60 ನ್ನು ಶಂಕರ ಮಾಂತಪ್ಪ ಕಟ್ಟಿ ಖರೀದಿ ಮಾಡಿದ್ದಾರೆ, ಪ್ಲಾಟ ನಂ. 58 ಮತ್ತು 59 ನ್ನು ಬಾಗೇವಾಡಿ ರವರು ಖರೀದಿ ಮಾಡಿದ್ದಾರೆ ಹಾಗೂ ಹಬೀಬ ಎನ್ನುವವರು ಸಹ ಖರೀದಿ ಮಾಡಿದ್ದಾರೆ, ಮುನಸಿ ಅವರು ಸಹ ಖರೀದಿ ಮಾಡಿದ್ದಾರೆ ಆದರೆ ಅವರ ಪ್ಲಾಟ ನಂಬರ ಹೇಳಲು ಬರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಇಂತವರು ಇಂತಹ ಪ್ಲಾಟ ಖರೀದಿ ಮಾಡಿದ್ದಾರೆ ಎಂದು ಬರೆಸಿದ್ದೆನೆ.

**(ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ವಾಟೀ ಸವಾಲನ್ನು ಮುಂದೂಡಲಾಯಿತು)**

**( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
ಸಿ ಜೆ ಮತ್ತು ಜೆ ಎಂ ಎಫ್ ಸಿ , ಹುಕ್ಕೇರಿ